|| ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನೃಸಿಂಹಾಯನಮಃ ||

ರಾಗ : ಭೌಳಿ ತಾಳ : (ತಿಶ್ರ) ಝಂಪೆ

ಎನ್ನ ಬಿನ್ನಪ ಕೇಳು ಧನ್ವಂತ್ರಿ ದಯಮಾಡು ಸಣ್ಣವನು ಇವ ಕೇವಲ
ಬನ್ನಬಡಿಸುವ ರೋಗವನ್ನು ಮೋಚನೆ ಮಾಡಿ ಚೆನ್ನಾಗಿ ಪಾಲಿಸುವುದು
ಕರುಣಿ ||ಪ ||

ಆರೋಗ್ಯ ಆಯುಷ್ಯ ಐಶ್ವರ್ಯವೆಂಬೊ ಈ ಮೂರುವಿಧವಸ್ತುಗಳು
ನಾರಾಯಣನ ಭಜಕರಾದವರ ಸಾಧನಕೆ ಪೂರ್ಣವಾಗಿಪ್ಪವು
ಘೋರ ವ್ಯಭಿಚಾರ ಪರನಿಂದೆ ಪರ ವಿತ್ತಾಪಹಾರಮಾಡಿದ ದೋಷದಿ
ದರಿದ್ರರಾಗುವರು ಮೂರು ವಿಧದಿಂದಲಿ ವಿಧದಿಂದಲಿ ಕಾರಣನು ನೀನೆ
ದುಷ್ಕರ್ಮ ಪರಿಹರಿಸುವುದು ಹರಿಯೆ || 1 ||

ವಸುಮತಿಯ ಮೇಲಿನ್ನು ಅಸುರ ಜನರೆ ಬಹಳ ವಶವಲ್ಲ ಕಲಿಯ ಬಾಧೆ
ಬಿಸಿಲಿಂದ ಪೀಡಿತವಾದ ಸಸಿಗಳಂತೆ ಮಳೆಗರೆದು ಕುಶಲದ ಪಾಲಿಸುವುದು
ಕೆಸರಿಂದ ಕೆಸರು ತೊಳೆದಂತೆ ಕರ್ಮದ ಪಥವು ಅಸುನಾಥ ಹರಿಯೆ
ಪೊರೆಯೊ ಸ್ವಾಮಿ || 2 ||

ಆಧಿವ್ಯಾಧಿಗಳು ಉನ್ಮಾದ ವಿಭ್ರಮ ನಾನಾ ಬಾಧೆಗೌಷಧವು ನೀನೆ
ಹೇ ದೇವ ನಿನ್ನ ಕರಕಲಶ ಸುಧೆವೆರೆದು ಸಾಧುಗಳ ಸಂತೈಸುವಿ
ಮೋದಬಡಿಸುವಿ ನಿನ್ನ ಸಾಧಿಸುವರಿಗೆ ಶುಭೋದಯಂಗಳನೀವಿ
ಆದರಿಸಿ ಇವಗೆ ತವಪಾದಧ್ಯಾನವನಿತ್ತು ಸಾಧುಗಳೊಳಗಿಟ್ಟು
ಮೋದಕೊಡು ಸರ್ವದಾ || 3 ||

ಅನ್ಯರನು ಭಜಿಸದಲೆ ನಿನ್ನನೆ ಸ್ತುತಿಸುತ ನಿನ್ನ ಚಿಹ್ನೆಗಳ ಧರಿಸಿ
ನಿನ್ನವರನೆನಿಸಿ ನಿನ್ನ ನಾಮೋಚ್ಚರಿಸಿ ನಿನ್ನಿಂದ ಉಪಜೀವಿಸಿ
ಅನ್ನ ಆರೋಗ್ಯಕ್ಕೆ ಅಲ್ಪ ಜೀವಿಗಳಿಗೆ ಇನ್ನು ಅಲ್ಪರಿಯಬೇಕೆ

ನಿನ್ನ ಸಂಕಲ್ಪ ಭಕ್ತರ ಪೋಷಕನೆಂಬ ಘನ್ನ ಬಿರುದಿನ್ನು

ಉಳುಹೊ ಸಲಹೊ ॥ 4 ॥

ನಿನ್ನವರಲಿ ಇವಗೆ ಇನ್ನು ರತಿಯನ್ನುಕೊಟ್ಟು ನಿನ್ನವನೆಂದು ಅರಿದು
ನಿನ್ನ ನಾ ಪ್ರಾರ್ಥಿಸಿದೆ ಅನ್ಯರಿಗೆ ಅಲ್ಪರಿಯೆ ಎನ್ನ ಪಾಲಿಸುವ ದೊರೆಯೆ
ಎನ್ನ ಮಾತಲ್ಲವಿದು ಎನ್ನ ಹಿರಿಯರ ಮಾತು ಮನ್ನಿಸಬೇಕು ಕರುಣಿ
ಅನಂತ ಗುಣಪೂರ್ಣ ಗೋಪಾಲವಿಠಲ ಇನ್ನಿದನೆ

ಪಾಲಿಸುವುದೊ ಸ್ವಾಮಿ ॥ 5 ॥

॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

|| ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನೃಸಿಂಹಾಯನಮಃ ||

ರಾಗ : ಮೋಹನ ತಾಳ: ಆದಿತಾಳ

ಮೂರು ನಾಮಗಳ ಧರಿಸಿದ ಕಾರಣವೇನೊ
ಸಾರಿ ಪೇಳೆಲೊ ಈಗಲೆ || ಪ ||

ಶ್ರೀರಮಾಪತಿ ಶ್ರೀನಿವಾಸ ವೆಂಕಟರಮಣ
ಯಾರು ಇಟ್ಟರೊ ನಿನಗೆ ಮೂರು ನಾಮಗಳ || ಅ . ಪ. ||

ಶುದ್ಧ ವೈಷ್ಣವರೆಲ್ಲ ಶುದ್ಧ ಮೂರುತಿ ಎಂದು
ಶುದ್ದ ಪಾದಕೆ ಎರಗಿ ಕರವ ಮುಗಿದು
ಎದ್ದು ನೊಡಲು ನಿನ್ನ ಪಣೆಯೊಳೀಪರಿ ಇರಲು
ಮಧ್ವಮತದ ದೈವವೆಂದು ನಿನ್ನ ಕರೆಯುವರೆ || 1 ||

ಸಾಲದೆ ನಿನ್ನ ಸೌಂದರ್ಯಕ್ಕೆ ಒಂದು ತಿಲಕ
ಪಾಲಸಾಗರಶಾಯಿ ಚೆಲುವಮೂರ್ತಿ
ಕಾಲಕಾಲಕೆ ಬರುವ ಭಕುತಜನಗಳ ವೃಂದ
ದೃಷ್ಟಿತಾಕುವುದೆಂಬ ತೋರುವ ಬಗೆಯೊ || 2 ||

ಮೂರು ಲೋಕಗಳಿಹವು ಮೂರುರೂಪನ ನಾನು
ಮೂರು ಮಾಳ್ಪೆನು ಜಗವ ಮೂರುಗುಣದಿ
ಮೂರುತಾಪವ ಗೆದ್ದು ಮಾರ್ಗದಿ ಭಜಿಸಿ
ಪಾರು ಮಾಡುವೆನೆಂದು ತೋರುವ ಬಗೆಯೊ || 3 ||

ಮೂರೆರಡು ಎರಡೊಂದು ಇಂದ್ರಿಯ ವರ್ಜಿಸಲು
ತೋರುವನು ನಿಜರೂಪ ಭಕ್ತನೆಂದು
ಸಾರುತಿದ್ದರು ವಾಯು ಅರಿಯದೆ ಭಜಿಸಿದಗೆ
ಮೂರುನಾಮಗಳೆ ಗತಿ ಎನುವ ಬಗೆಯೊ || 4||

ಶ್ರೀಲೋಲಕೃಷ್ಣ ಗೋಪಾಲವಿಠಲ ನಿನ್ನ
ಈ ಬಗೆಯ ಲೀಲೆಗಳ ಅರಿವರ್ಯಾರೊ
ವ್ಯಾಸಶಯನ ವೆಂಕಟೇಶನ ಎನ್ನ ಮನಕೆ
ಕಾಲಕಾಲಕ್ಕೆ ನಿನ್ನ ಲೀಲೆಗಳ ತೋರೊ || 5 ||

|| ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ||

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನೃಸಿಂಹಾಯನಮಃ ॥

ರಾಗ : ಹಿಂದೂಸ್ಥಾನಿಕಾಪಿ ತಾಳ: ಆದಿತಾಳ

ಬರುವುದೆಲ್ಲ ಬರಲಿ ಸಿರಿಹರಿಯ ಕರುಣವಿರಲಿ ॥ ಪ ॥

ಗುರುಗಳ ಚರಣಸರೋರುಹ ಮಧುರಸ ತರ

ತರ ತಪದಿ ಮೈಮರೆತಿರಲಿ ॥ ಅ . ಪ ॥

ಸತಿಯ ಮತಿಯ ಕೆಡಲಿ ಸುತರತಿ ಪತಿತರಾಗಿ ಬರಲಿ

ಜೊತೆಯೊಳಿದ್ದ ಹಿತ ಪ್ರತಿಕೂಲನಾಗಲಿ

ವತನ ಕೆಡುವ ಪ್ರಯತ್ನವು ಬರಲಿ ॥ 1 ॥

ಅರಸು ಕರೆಸದಿರಲಿ ಸತಿ ಸರಸಸುರಿಸದಿರಲಿ

ನರಸಖನಿಗೆ ಭಾರ ಸಮರ್ಪಿಸಲಿ

ವಿರಸಮಾಡಿ ಮನೆ ಮುರಿಸುತ ಬರಲಿ ॥ 2 ॥

ಮಾನಮಾಡದಿರಲಿ ಜನರಪಮಾನಮಾಡಿ ನಗಲಿ

ಜ್ಞಾನಹೀನನೆಂದೆನುತ ನಿಂದಿಸಲಿ

ಶ್ರೀನಿಧಿ ಗೋಪಾಲವಿಠಲನು ಬೆರಿಲಿ ॥ 3 ॥

॥ ಶ್ರೀಮಧ್ವೇಶಾರ್ಪಣಮಸ್ತು॥

|| ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನೃಸಿಂಹಾಯನಮಃ ||

ರಾಗ : ಆನಂದ ಭೈರವಿ　　　　　　　　　　　　　ತಾಳ: ಆದಿತಾಳ

ಬಾರಯ್ಯ ಬಾ ಬಾ ಭಕುತರಪ್ರೀಯ ಶ್ರೀನಿವಾಸರಾಯ
ಮಾರಜನಕ ಮುಕ್ತರೊಡೆಯ ದೇವಯ್ಯ ಜೀಯ　　　　|| ಪ ||

ವಾರಿಜಲಯಪತೆ ವಾರಿಜನಾಭನೆ ವಾರಿಜಭವ ಪಿತ
ವಾರಿಜನೇತ್ರನೆ ವಾರಿಜಮಿತ್ರ ಅಪಾರ ಪ್ರಭಾವನೆ
ವಾರಿಜಜಾಂಡದಕಾರಣ ದೊರೆಯೆ　　　　　　　|| ಅ.ಪ. ||

ಸ್ಯಂದನವೇರಿ ಬಾಪ್ಪಾರಂಗ ದೇವೋತ್ತುಂಗ
ನಂದನನಂದನ ಅರಿಮದಭಂಗ ಕಾರುಣ್ಯಾಪಾಂಗ
ಸುಂದರ ವಿಗ್ರಹ ಶುಭಾಂಗ ವಿಹಂಗ ತುರಂಗ
ಕಂದವಿರಿಂಚಿಯು ನಂದಿವಾಹನ ಅಮ -
ರೇಂದ್ರ ಸನಕ ಸನಂದನಾದಿಮುನಿವೃಂದ ಬಂದುನಿಂದು
ಧಿಂ ಧಿಂ ಧಿಂ ಧಿಮಿಕೆಂದು ನಿಂದಾಡಲು ಆನಂದದಿ ಮನಕೆ　　|| 1 ||

ಜಗಜನ್ಮಾದಿಕರ್ತೃ ಗೋವಿಂದ ಉದರದಿ ಲೋಕವ
ಲಘುವಾಗಿ ಧರಿಸಿ ಮುಕುಂದ ಭಕ್ತರ ಮನಕೆ
ಝುಗಝುಗಿಸುತ್ತಪೊಳೆವಾನಂದ ನಿಗಮಾವಳಿಯಿಂದ
ಅಗಣಿತ ಮುನಿಗಣ ನಗಖಗಮೃಗಶಶಿಗಗನಮಣ್ಯಾದ್ಯರು
ಸೊಗಸಾಗಿ ಬಗೆಬಗೆ ಪೊಗಳುತಲಿ ಬೇಗ ಚಿಗಿ -
ಚಿಗಿದಾಡಲು ಮುಗಳುನಗೆಯ ಮಹೋರಗಗಿರಿವಾಸ　　|| 2 ||

ತಡಮಾಡಬೇಡಯ್ಯ ಹೇ ನಲ್ಲ ವಾಕು ಲಾಲಿಸು ಎ -
ನ್ನೊಡೆಯ ಶ್ರೀಗೋಪಾಲವಿಠಲ ದೇವ ಪರಾಕು
ಅಡಿಯಿದು ಭಕ್ತವತ್ಸಲ ಶ್ರೀಲಕುಮಿನಲ್ಲ
ಮಡುವಿನೊಳಗೆ ಗಜ ಮೊರೆಯಿಡಲಾಕ್ಷಣ ಮಡದಿಗೆ ಹೇಳದೆ
ದುಡುದುಡನೆ ಬಂದು ಹಿಡಿದು ನಕ್ರನ ಬಾಯಿ
ಕಡಿದು ಬಿಡಿಸಿದನೆ ಸಡಗರದಲಿ ರಮೆ ಪೊಡವಿಯೊಡನೆ ಬೇಗ　|| 3 ||

ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು||

|| ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವರಾಜಗುರುಭ್ಯೋನಮಃ ||

ರಾಗ : ಕಾಂಬೋಧಿ ತಾಳ : ಆದಿತಾಳ

ಮುಖ್ಯಪ್ರಾಣನೆ ಕೈಯ ಮುಗಿದು ಬೇಡುವೆನಯ್ಯ || ಪ ||
ಭಕ್ತಿಪಾಲಿಸು ಹರಿಯ ಪಾದ ಬಳಿಯ
ಮುಕ್ತಿಯಿಂದಲಿ ವಿವಿಧ ಸಂಸಾರ ದಾಟಿ
ಶಕ್ತಿ ಎನಗೆ ಇತ್ತು ಸಲಹೊ ನಮಗೆ ಕರ್ತು || ಅ.ಪ ||
ನಿನ್ನಮತ ಪೊಂದಿಸು ನಿನ್ನ ಚಿಹ್ನೆಯ ಧರಿಸು
ನಿನ್ನ ಶಾಸ್ತ್ರದೊಳೆನ್ನ ಮುಳುಗಾಡಿಸು
ನಿನ್ನವರೊಳಗಿಡಿಸು ನಿನ್ನ ಮೂರ್ತಿಯ ತೋರಿಸು
ನಿನ್ನ ವ್ಯಾಪ್ತತ್ವ ಚೆನ್ನಾಗಿ ತಿಳಿಸು
ಇನ್ನು ದಿನದಿನದಿ ಎನ್ನಿಂದ ಮಾಡಿದ ಕರ್ಮ
ನಿನ್ನ ಅಂತರ್ಯಾಮಿಗೊಪ್ಪಿಸೊ
ಬಿನ್ನಪವ ಲಾಲಿಸು ಘನ್ನ ದಯಾಳುವೆ
ನಿನ್ನ ಹೊರತು ಎನಗೆ ಅನ್ಯಗಲಿಯಿಲ್ಲ || 1 ||
ನೀನು ಪಿಡಿಯಲು ಹರಿಯು ತಾನು ಪಿಡಿವನು
ನೀನು ಮುನಿದರೆ ಹರಿಯು ತಾನು ಮುನಿವ
ನೀನು ಮಾಡಿದ ಕರ್ಮ ನಮ್ಮ ನಿನ್ನ ಒಡೆಯಗೆ ಧರ್ಮ
ನೀನು ಇದ್ದರೆ ಹರಿಯು ತಾನು ಇರುವ
ನೀನು ಬಿಟ್ಟರೆ ಹರಿಯು ತಾನು ಬಿಟ್ಟೋಡುವ
ನೀನಿತ್ತುದದು ಏನಾದದ್ದೆಲ್ಲ
ಜ್ಞಾನಸುಖದಾಯ(ಕ) ನಿಧಾನ ಮುಕ್ತಿಪ್ರದಾಯ(ಕ)
ದೀನರಕ್ಷಕರಗುರುವೆ ದಾನಿ ಕಲ್ಪತರುವೆ || 2 ||
ನವವಿಧ ನೀನು ಮುಖ್ಯಾಭಿಮಾನಿ
ಕವಿಗಳಿಗೆ ನೀನು ಕರುಣಿಸಿದರುಂಟು
ಭವರೋಗದ ಧಾತು ನೋಡಿ ನಡೆಸುವ ಮಂತ್ರಿ
ಭವರೋಗದಿ ಕಡೆಹಾಯ್ವುಪಾಯವ ತೋರಿಸೊ

ಭವದನುಗ್ರಹ  ಎನ್ನಮೇಲೆ ಪರಿಪೂರ್ತಿಸಿ
ಭವನ ಬಿಡಿಸದೆ ಭಕುತಿಯೆನಗೆ ಇತ್ತು
ಭವಹಾರಿ ಚೆಲ್ವ ಗೋಪಾಲವಿಠಲನ ಅನು-
ಭವಕೆ ತಂದಿತ್ತೆನಗೆ  ಬಹುಪಂಥದಲ್ಲಿರಸೊ

|| ಶ್ರೀಮಧ್ವೇಶಾರ್ಪಣಮಸ್ತು||

ರಾಗ : ವಸಂತ                                        ತಾಳ : ಆದಿತಾಳ

ಮಂಗಳ ಮುಖ್ಯ ಪ್ರಾಣೇಶಗೆ ಜಯ
ಮಂಗಳ  ವಾಯುಕುಮಾರಗೆ || ಪ ||
ಅಂಜನಾದೇವಿಯ ಕಂದಗೆ ಮಂಗಳ
ಕಂಜಾಕ್ಷಹನುವಗೆ ಮಂಗಳ
ಸಂಜೀವನ ತಂದಾತಗೆ ಮಂಗಳ
ಸಜ್ಜನಪರಿಪಾಲಗೆ ಮಂಗಳ || 1 ||
ಅತಿ ಬಲವಂತ ಶ್ರೀ ಭೀಮಗೆ ಮಂಗಳ
ಪೃಥ್ವಿಮಲ್ಲರ ಗೆಲಿದಗೆ ಮಂಗಳ
ಸತಿಯಳ ಸೇರೆಯ ಸೆಳೆದ ದೈತ್ಯನ ಕೊಂದ
ಶಿರವಚಂಡಾಡ್ದಗೆ ಮಂಗಳ || 2 ||
ಸೀತಾದೇವಿಯ ಬಾಲಗೆ ಮಂಗಳ
ಶ್ರೀರಾಮರ ಬಂಟಗೆ ಮಂಗಳ
ಗೋಪಾಲವಿಠಲನ್ನ ಪೂಜೆಯ ಮಾಡುವ
ಗುರುಮಧ್ವಮುನಿರಾಯಗೆ ಮಂಗಳ || 3 ||

|| ಶ್ರೀಮಧ್ವೇಶಾರ್ಪಣಮಸ್ತು||

॥ ಶ್ರೀವಾದಿರಾಜಗುರುಭ್ಯೋನಮಃ ॥

ರಾಗ : ಖರಹರಪ್ರಿಯ ತಾಳ: ಆದಿತಾಳ

ವಾದಿರಾಜಮುನಿಪ ಹಯಮುಖ ಪಾದಕಮಲ ಮಧುಪ ॥ ಪ ॥

ನೀ ದಯದಲಿ ತವಪಾದಧ್ಯಾನವನು
ಆದರದಲಿ ಕೊಟ್ಟಾದರಿಸೆನ್ನನು ॥ ಅ.ಪ ॥

ಮೂಷಕ ಬಿಲದಿಂದ ಉದರ ಪೋಷಕ ಬರಲಂದು
ವಾಸುಕಿ ಭಯದಿ ನಿಮ್ಮಾಸನದೆಡೆ ಬರೆ
ಕ್ಲೇಶ ಕಳೆದು ಸಂತೋಷಗೈಸಿದೆ ॥ 1 ॥

ಮುಂದೆ ಭೂತನರನ ಪ್ರೇರಿಸಿ ಹಿಂದೆ ಒಬ್ಬ ನರನ
ನಿಂದರಿಸತಿ ಆನಂದದಿಂದ ಜನ-
ವೃಂದ ನೋಡುತ್ತಿರೆ ಅಂದಣ ನಡೆಸಿದ್ಯೊ ॥ 2 ॥

ಶಾಸ್ತ್ರಪ್ರಸಂಗದಲಿ ನಾರಾಯಣಭೂತರ ಗೆಲಿದಲ್ಲೆ
ಖ್ಯಾತಿಯಿಂದ ಬಹು ಮಾರನಾಡಿ ಶ್ರೀ -
ನಾಥನ ಮಂದಿರ ಪ್ರೀತಿಲಿ ತರಿಸಿದ್ಯೊ ॥ 3 ॥

ತುರಗವದನ ಪಾದ ಭುಜ( ದಲಿ) ಗಳಲಿ
ಧರಿಸಿಕೊಂಡು ಮೋದ ಕಡಲೆಮಡ್ಡಿಯನು
ಕರದಿಂದುಣಿಸಿದ ಗುರುವರಶೇಖರ ॥ 4 ॥

ಆ ಮಹಾ ಗೋಪಾಲವಿಠಲ ತಾಮರಸದಳಗಳ
ಧೀಮಂತರಿಗೆ ಸುಕಾಮಿತವನು ಕೊಡುವ
ಆ ಮಹಾಮಹಿಮ ॥ 5 ॥

॥ ಶ್ರೀಗೋಪಾಲದಾಸಗುರ್ವಂತರ್ಗತ ಶ್ರೀವಾದಿರಾಜಾಂತರ್ಗತ
ಶ್ರೀಮಧ್ವೇಶಾರ್ಪಣಮಸ್ತು॥

|| ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನೃಸಿಂಹಾಯನಮಃ ||

ರಾಗ : ಬ್ಯಾಗಡೆ ( ಜೀವನಪುರಿ ) ತಾಳ: ಝಂಪೆ

ಅಂತರಂಗದ ಕದವು ತೆರೆಯಿತಿಂದು || ಪ ||

ಎಂತು ಪುಣ್ಯದ ಫಲವು ಪ್ರಾಪ್ತಿ ದೊರಕಿತೊ ಎನಗೆ || ಅ.ಪ ||

ಏಸುದಿನವಾಯಿತೊ ಬೀಗಮುದ್ರೆಯ ಮಾಡಿ ।
ವಾಸವಾಗಿದ್ದರೋ ದುರುಳರಿಲ್ಲಿ ||
ಮೋಸವಾಯಿತು ಇಂದಿನ ತನಕ ತಮಸಿನ ।
ರಾಶಿಯೊಳಗೆ ಹೂಳಿ ಕಾಣಿಸುತ್ತಿರಲಿಲ್ಲ || 1 ||

ಹರಿಕರುಣವೆಂಬಂಥ ಕೀಲಿ ಕೈ ದೊರಕಿತು ।
ಗುರುಕರುಣವೆಂಬಂಥ ಶಕ್ತಿಯಿಂದ ||
ಪರಮ ಭಾಗವತರ ಸಹವಾಸದಲಿ ಪೋಗಿ ।
ಹರಿಸ್ಮರಣೆಯಿಂದಲ್ಲಿ ಬೀಗಮುದ್ರೆಯ ತೆಗೆದು || 2 ||

ಸುತ್ತಲಿದ್ದವರೆಲ್ಲ ಪಲಾಯನವಾದರು ।
ಭಕ್ತಿಕಕ್ಕಡವೆಂಬ ಜ್ಞಾನದೀಪ ||
ಜತ್ತಾಗಿ ಹಿಡಕೊಂಡು ದ್ವಾರದೊಳಗೆ ಪೊಕ್ಕೆ ।
ಎತ್ತನೋಡಿದರತ್ತ ಶೃಂಗಾರಸದನ || 3 ||

ಹೊರಗೆ ದ್ವಾರವು ನಾಲ್ಕು ಒಳಗೈದು ದ್ವಾರಗಳು ।
ಪರ ದಾರಿಗೆ ಪ್ರಾಣ ಜಯವಿಜಯರು ||
ಮಿರುಗುವೊ ಮಧ್ಯಮಂಟಪ ಕೋಟಿರವಿಯಂತೆ ।
ಸರಸಿಜನಾಭನ ಅರಮನೆಯ ಸೊಬಗು || 4 ||

ಸ್ವಮೂರ್ತಿಗಣ ಮಧ್ಯ ಸಚ್ಚಿದಾನಂದೈಕ ।
ರಮೆಧರೆಯರಿಂದಲಾಲಿಂಗಿತ್ವದಿ ||
ಕಮಲಜಾದಿಗಳಿಂದ ತುತಿಸಿಕೊಳ್ಳುತ ಹೃದಯ - ।
ಕಮಲದೊಳಗಿರುವ ಶ್ರೀವಿಜಯವಿಠಲನ ಕಂಡೆ || 5 ||

|| ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ||

॥ಶ್ರೀಃ ॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

ರಾಗ : ಶ್ರೀ ಧ್ರುವತಾಳ

ಇಂದಿರಾದೇವಿ ಮಾತೆ ತಂದೆ ವಿಠಲನರ
ವಿಂದ ಚರಣಕಿನ್ನು ಅಂದಿಗೆ ಗೆಜ್ಜೆಯಾ(ದೆ)
ಹೊಂದಿಕೆಯಾದ ಊರು ಜಾನು ಕೈಯಮೇಲೆ
ಚೆಂದದ ಸ್ವರೂಪ ಪೀತಾಂಬರೊಡ್ಯಾಣಾದೆ
ಮಂದರಧರನೊಕ್ಷಸ್ಥಳದಲಿ ನೀ ನಿಂ(ದೆ)
ಕಂದರದಲಿ ಚಿತ್ರ ವೈಚಿತ್ರ್ಯಪರಿ
ಗಂಧವು ಪದಕ ಹಾರಂಗಳು ಪುಷ್ಪತುಲಸಿ
ಯಿಂದೊಪ್ಪುವ ಅಲಂಕಾರ ನಂದ ಶೋಭಿತಳಾದೆ
ಒಂದೊಂದು ಹಸ್ತದಲ್ಲಿ ಆಯುಧಗಳಾದೆ
ಚೆಂದುಳ್ಳ ಕಡೆಯ ತೋಳ್ಬಂದಿ ಭುಜಕೀರುತಿ
ಕುಂದು ಇಲ್ಲದೆ ಕರ್ಣಕುಂಡಲ ನಾನಾಪರಿ
ಅಂದವಾದರಳೆಲೆ ಸುಂದರ ಕಿರೀಟವು
ಸಂದಿಸಂದಿಗೆ ನಾನಾಭರಣಾಲಂಕಾರಳಾದೆ
ಇಂದಿರೇಶನ ಪ್ರತಿ ಅವಯವಗಳಲಿನ್ನು
ಇಂದಿರೆ ಪ್ರತಿ ಪ್ರತಿ ವಸ್ತುವಾದೆ
ಕಂದರ್ಪನಯ್ಯನ ಆನಂದಬೆರೆದು ಸುಖಸುರಿದೆ ನೀ
ಒಂದರಘಳಿಗೆ ಅಗಲದೆ ಇನ್ನು
ಕಂದ ಬೊಮ್ಮನು ಮತ್ತೆ ನಂದಿವಾಹನ ಅಮ
ರೇಂದ್ರ ಸನಕ ಸನಂದರಿಂದಲಿನ್ನು
ಕುಂದಿಲ್ಲದೋಲಗವ ನಂದದಿ ಕೊಳುತ ಮುಕ್ತ -
ರಿಂದ ಸೇವಿತಳಾಗಿ ಎಂದೆಂದು ಬಿಡದಲೆ
ಸಂದೇಹವಿಲ್ಲದೆ ಗೋಪಾಲವಿಠಲನ
ಪೊಂದಿ ಸುಖದಲಿ ಚೆಂದದಿ ಮೆರೆದೆ ॥ ೧ ॥

ಮಠ್ಯತಾಳ

ಹರಿ ಅನಿರುದ್ಧನಾಗೆ ಸಿರಿ ಶಾಂತಿದೇವಿಯಾದೆ
ಹರಿ ಪ್ರದ್ಯುಮ್ನನಾಗಿ ಸಿರಿ ಕೃತಿದೇವಿಯಾದೆ
ಹರಿ ಸಂಕರುಷಣನಾಗಿ ಸಿರಿ ಜಯದೇವಿಯಾದೆ
ಹರಿವಾಸುದೇವನಾಗೆ ಸಿರಿ ಮಾಯಾದೇವಿಯಾದೆ
ಎರಡೆರಡವತಾರಕ್ಕೆ ಮರಳಿ ಮರಳಿ ಚ
ತುರವತಾರಗಳು ಆದೆ
ಪರಿಪರಿ ಅವತಾರಕ್ಕೆ ಪರಿಪರಿ ರೂಪಳಾದೆ
ಶರಣರ ಪಾಲಕ ಗೋಪಾಲವಿಠಲನ
ಚರಣ ಕಮಲವನ್ನು ಪರಿಪರಿ ಸೇವಿಸುತ ॥ ೨ ॥

ತ್ರಿಪುಟತಾಳ

ಧರೆಯ ರೂಪದಿ ಹರಿಗೆ ಕುಳ್ಳಿರೆ ಗದ್ದುಗೆಯಾದೆ
ಮೆರೆವ ಅವ್ಯಾಕೃತ ಗಗನವೆ ಕೊಡೆಯಾದೆ
ಎರಡೆರಡೊಂದು ರೂಪದಿ ಹರಿಯಿತ್ತಲು ರಮಾ
ಮರಳಿ ಶ್ರೀರೂಪದಿ ಹರಿಯಿಂದ ಬೆರೆದು
ಸ್ವರಮಣನ ರಮಿಸಿ ಯೋಗನಿದ್ರೆಯ ಮಾಡಿ
ಹರಿಯಾಜ್ಞದಿಂದ ಅಂಭ್ರಣೆರೂಪಳಾದೆ
ಪರಿಪರಿ ಶ್ರುತಿಯಿಂದ ಸೃಷ್ಟಿಯ ರಚಿಸೆಂದು
ಹರಿಯ ನಾಭಿಯಲಿನ್ನು ಸರಸಿಜ ರೂಪದಿ
ವಿರಿಂಚಿಯನೆ ಪಡೆದ ಕರುಣಾಕರೆ ಮತ್ತೆ
ಅರಿವಂತೆ ಅಜಗಿನ್ನು ತಪ ತಪವೆಂದು ಅ-
ಶರೀರ ಹಿತ ನುಡಿದೆ ಅವ್ಯಾಕೃತಕೆ ಅಭಿಮಾನಿ

ಪರಿಪೂರ್ಣಗುಣಭರಿತ ಗೋಪಾಲವಿಠಲನ
ಕರುಣದಿಂದೆರಡೆರದು ಸೃಷ್ಟಿಯ ರಚಿಸಿದೆ ॥ ೩ ॥

ಅಟ್ಟತಾಳ

ಹರಿಯಾಜ್ಞೆಯಿಂದಲಿ ಜಡ ಪ್ರಕೃತಿ ದೆಸೆಯಿಂದ
ವರ ತ್ರಿಗುಣಾತ್ಮಕವಾದಂಥ ಮಹತತ್ವ ಅ-
ದರಿಂದ ವೈಕಾರಿಕ ತೈಜಸ ತಾಮಸವನ್ನು
ಭರಿತವಾದಂಥ ಅಹಂಕಾರ ತತ್ವ
ಪರಿಪರಿ ಸೃಷ್ಟಿಸಿದೆ ವರಮಾಯಾ ನೋವಿಲ್ಲದೆ
ಪರಮ ದಯಾಳು ಗೋಪಾಲವಿಠಲನು
ಕರುಣಿಸುವನು ನೀ ಕರವಿಡಿದವರ ॥ ೪ ॥

ಆದಿತಾಳ

ಮಹತತ್ವ ದೆಸೆಯಿಂದ ಬೊಮ್ಮನ ಸೃಷ್ಟಿಸಿದೆ
ಅಹಂಕಾರ ವೈಕಾರಿಕದಿಂದ ಮನಸ್ಸು ಆ
ಮಹ ಇಂದ್ರಿಯಗಳಿಗಭಿಮಾನಿ ದೇವತೆಗಳನ್ನು
ಅಹಂಕಾರ ಪಂಚ ತನ್ಮಾತ್ರೆಯನ್ನು ಸೃಷ್ಟಿಸಿದೆ
ಅಹಂಕಾರ ತೈಜಸದಿಂದ ಚಕ್ಷುರಾದಿ
ಇಹ ಇಂದ್ರಿಯಗಳನೆಲ್ಲ ಸೃಷ್ಟಿಸಿದೆ
ಅಹಂಕಾರ ತಾಮಸದಿಂದಲಿ ಪಂಚ-
ಮಹಾಭೂತಂಗಳ ಸೃಷ್ಟಿಸಿದೆ
ಮೋಹದಿಂದ ಸಕಲ ತತ್ವೇಶರ ಸೃಷ್ಟಿಸಿದೆ
ಆ ಹರಿ ಕರುಣಾಪೂರ್ಣ ಕಟಾಕ್ಷದಿ ಈ
ಮಹಾ ಜಗಕೆಲ್ಲ ಪ್ರೇಮದಿಂದ ಸಲಹುವೆ
ಮೋಹನ ಮೂರುತಿ ಗೋಪಾಲವಿಠಲನ
ಸಾಹಸವಿಲ್ಲದೆ ರಹಸ್ಯ ಪೂಜಿಪೆ ॥ ೫ ॥

ಜತೆ

ನಮೋನಮೋ ನಿನ್ನ ಪಾದಕಮಲವೆ ಮೊರೆ ಹೊಕ್ಕೆ
ಮಮತೆ ಪುಟ್ಟಿಸೆನಗೆ ಗೋಪಾಲವಿಠಲನಲ್ಲಿ ॥ ೬ ॥

॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

॥ಶ್ರೀಃ ॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

ರಾಗ : ನೀಲಾಂಬರಿ ಧ್ರುವತಾಳ

ಎಲ್ಲಿ ನೋಡಲು ನೀನಿಲ್ಲದ ಸ್ಥಳವಿಲ್ಲ
ಎಲ್ಲರಂತರ್ಯಾಮಿ ಎಲ್ಲಿಯು ನೀನೆ
ಹುಲ್ಲುಕಾಷ್ಠ ಜಡ ಚೇತನಗಳಲ್ಲಿ ನೀ-
ನಿಲ್ಲದಿಲ್ಲವೆಂದು ಎಲ್ಲ ಸ್ತುತಿಸುತಿದೆ
ಸಲ್ಲದ ಮನುಜನು ನಿನಗೆ ತನಗೆ ಭೇದ-
ವಿಲ್ಲವೆಂಬುನಿಗೆ ಏನೆಂಬ ಹರಿಯೆ
ಜಲಜ ನೀರೊಳಗಿದ್ದು ಲೇಪನವಿಲ್ಲದಂತೆ
ಎಲ್ಲ ಪ್ರೇರಕನು ಎಲ್ಲರಲ್ಲಿಯು ನೀನೆ
ಚಿಲ್ಲರ ದೈವರ ಗಂಡ ಗೋಪಾಲವಿಠಲ ನಿನ್ನ
ಬಲ್ಲವರೆ ಬಲ್ಲರು ಎಲ್ಲವರರಿಯರು ॥ ೧ ॥

ಮಠ್ಯತಾಳ

ವಿಶ್ವತೋಮುಖ ನೀನೆ ವಿಶ್ವತೋ ಚಕ್ಷು ನೀನೆ
ವಿಶ್ವತೋ ಬಾಹು ನೀನೆ ವಿಶ್ವತೋ ಹಸ್ತ ನೀನೆ
ವಿಶ್ವತೋ ಶ್ರವಣನೆ ವಿಶ್ವಾಧಾರಕ ನೀನೆ
ವಿಶ್ವವ್ಯಾಪಕ ಸರ್ವ ವಿಶ್ವಮಯನು ನೀನೆ
ವಿಶ್ವನಾಮಕ ಹರಿ ಗೋಪಾಲವಿಠಲ
ವಿಶ್ವಾಸ ಕೊಡು ನಿನ್ನ ವಿಶ್ವ ಚರಣದಲ್ಲಿ ॥ ೨ ॥

ತ್ರಿಪುಟತಾಳ

ಅಂಗುಷ್ಠಾಗ್ರ ಮಾತ್ರ ಪರಿಮಾಣಮೂರುತಿ ನೀನೆ
ರಂಗ ಆತ್ಮ ಅಂತರಾತ್ಮಮೂರುತಿ ನೀನೆ
ಲಿಂಗದೇಹಭಂಗವಾಗುವುದಕ್ಕೆ ಸಾಧು
ಸಂಗದಲ್ಲಿ ಇಡುವ ಉತ್ತುಂಗ ಮಹಿಮ ನೀನೆ
ಗಂಗಾತೀರದಲ್ಲಿದ್ದು ಸುಜನರ ದೋಷಂಗಳ ಕಳೆವುದಕೆ
ಮಂಗಳಾತ್ಮ ಮೂರುತಿ ನೀನೆ
ಸ್ವಾಂಗಾಯ ನಮ್ಮ ಗೋಪಾಲವಿಠಲ
ಸಂಗದಲ್ಲಿರಿಸೊ ನಿನ್ನ ಡಿಂಗರಿಗರೊಡನೆ ॥ ೩ ॥

ಅಟ್ಟತಾಳ

ಸಿರಿಯಲ್ಲಿಯು ನೀನೆ ಪರಮೇಷ್ಠಿಯಲ್ಲಿಯು ನೀನೆ
ಮರುತವಾಣಿ ಭಾರತಿ ಎಲ್ಲರಲ್ಲಿಯು ನೀನೆ
ಉರಗನಲ್ಲಿಯು ನೀನೆ ಗರುಡನಲ್ಲಿಯು ನೀನೆ
ಗಿರಿಜಾಪತಿಯಲ್ಲಿಯು ಸುರಪತಿಯಲ್ಲಿಯು ನೀನೆ
ವರ ಸಿದ್ಧಸಾಧ್ಯ ಕಿನ್ನರರಲ್ಲಿಯು ನೀನೆ
ಗಿರಿಗುಹೆಗಳಲ್ಲಿ ಒಳಗೆ ಹೊರಗೆ ಎಲ್ಲ
ಕರೆದರೆ ಓ ಎಂಬ ಪ್ರತಿ ಶಬ್ದವು ನೀನೆ
ಪರಶುರಾಮನಾಗಿ ಪಾವಕನಲ್ಲಿ ನೀನೆ ಬ-
ಹಿರಂತರ್ದಶದಿಕ್ಕುಗಳಲ್ಲಿ ನೀನೆ ನೋಡಲು
ಕರಿಸಿಂಹ ಶಾರ್ದೂಲ ಮೊದಲಾದ
ಸರುವ ಜೀವರಲ್ಲಿ ಪರಿಪೂರ್ಣ ನೀನೆ
ಮರ ಮೃಗ ಮೊದಲಾದ ಅಖಿಳರಲ್ಲಿಯು ನೀನೆ
ಕರ್ಮಾನುಸಾರವಾದ ದುಷ್ಪರಂತಕ ನೀನೆ
ಧುರವಿಕ್ರಮ ನಮ್ಮ ಗೋಪಾಲವಿಠಲ
ದೂರ ದೂರನೆ ಅತಿ ದೂರತರನು ನೀನೆ ॥ ೪ ॥

ಆದಿತಾಳ

ನಿಗಮವ ತಂದಂಥ ನಗಧರನು ನೀನೆ
ಜಗವನು ತಂದಂಥ ಅಸುರಾಂತಕ ನೀನೆ

ಮಿಗೆ ಕಂಬದಿ ಬಂದ ನರಸಿಂಹನು ನೀನೆ
ಜಗವನೋರಡಿಯಾಗಿ ಅಳೆದ ವಾಮನ ನೀನೆ
ಮಗನಾಗಿ ಮಾತೆಯ ಘಾತಿಸಿದ ಭಾರ್ಗವ ನೀನೆ
ಜಗವರಿಯೆ ರಾವಣಾಂತಕನು ನೀನೆ
ನಗುತ ಪೂತಣೆ ಅಸುವ ಹೀರಿ ಶಕಟನ ಒದ್ದು
ಹಗೆ ಕಂಸನ ಕೊಂದ ಶ್ರೀಕೃಷ್ಣನು ನೀನೆ
ಮೃಗಧರಧರಗೊಲಿದು ಬತ್ತಲೆ ನಿಂದು ತ್ರಿಪುರವ
ಒಗೆದು ಮೆರೆದ ಬೌದ್ಧಾವತಾರನು ನೀನೆ
ಸೊಗಸಾಗಿ ಹಯವೇರಿದ ಕಲ್ಕಿಯು ನೀನಾದೆ
ಮಿಗೆ ಅನಂತಾವತಾರನು ನೀನಾದೆ
ಜಗಜನ್ಮಾದಿ ಕಾರಣ ಗೋಪಾಲವಿಠಲ
ನಿಗಮಗೋಚರ ಅಘಶೂನ್ಯ ಪಾವನನೆ ॥ ೫ ॥

ಜತೆ

ಸರ್ವಾಧಾರನೆ ಸರ್ವ ನಿರ್ಲೇಪನೆ
ಸರ್ವದರ್ಶನನಾಮ ಗೋಪಾಲವಿಠಲ ॥ ೬ ॥

॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

# ಪಾಲಿಸೆನ್ನನು ದೇವಾ

॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾಯನಮಃ ॥

ರಾಗ – ಮೆಥ್ಯಮಾವದಿ

ಪಾಲಿಸೆನ್ನನು ದೇವ, ಭುವನತ್ರಯಂಗಳ । ಲೀಲೆಯಿಂದಲಿ ಕಾವ,
ಹರಿಯೇ ಅನಾದಿ । ಮೂಲಸುಸ್ವಭಾವ ಪವನಂಗೆ ಜೀವ । ಪ ।
ಶ್ರೀಲಕುಮಿಪತಿ ಅಜಜನಕನಾದಿ । ಕಾಲನಿತ್ಯಾನಿತ್ಯಮುಕುತರ ।
ಕಾಲಕಾಲಕೆ ಪೊರೆವ ದಾತ ವಿ । ಶಾಲಮಹಿಮನೆ ಮೇಲು ಕರುಣದಿ ॥ಅ।ಪ ॥

ವಿಜಯಸಾರಥಿ ವೀರ, ವಿಶ್ವೇಶವಿಭುವರ । ಸುಜನ ಮನ ಸಂಚಾರ ,
ಶುಭಗುಣಗಣಾಂಬುಧಿ । ರಜತ ಮೂರ್ಗುಣ ದೂರ, ಪರತತ್ವ ಸಾರ ।
ಕುಜನಮರ್ದನ ಕುಮುದಸಖಮುಖ । ಕುಬ್ಜಮೂರುತಿ ಕುಮತಿಭಂಜನ ।
ಕುಜಪ್ರದಾಯಕ ಕುಟಿಲವರ್ಜಿತ । ಸುಜನ ಮನ ಅಂಬುಜ ದಿವಾಕರ ।
ಭುಜಗಶಯನನೆ ಭೂರಮಣಹರೇ । ದ್ವಿಜಧ್ವಜನೆ ಅಂಬುಜದಳೇಕ್ಷಣ ।
ಭಜಕಜನ ಚಕೋರ ಚಂದ್ರಮ । ವ್ರಜದ ಜಂಗುಳಿ ಕಾಯ್ದೆ ಕೃಷ್ಣ ।
ಅಜರಾಮರಣ ಅಪ್ರಮೇಯ ನಿಜಪೂರ್ಣಸಖ ನಿತ್ಯನಿರ್ಮಲ ।
ಗಜವರದ ಗಂಭೀರ ನಿಜಪದ । ಅಜನಿರಂಜನ ಅಘನಿವಾರಣ ।
ನಿಜಜನರ ಪೊರೆವಂತೆ ದೇವನೆ । ತ್ರಿಜಗದಲಿ ಅನ್ಯರನು ಕಾಣೆನೊ ।
ದ್ವಿಜರ ರಕ್ಷಿಸಿ ನಿಜರ ತಾಮಸ । ತ್ಯಜಿಸುವಂದದಿ ಮಾಡು ಸರ್ವದ ॥ ೧ ॥

ಪಟುತರಾಂಗನೆ ದೇವ ಜೀವೇಶ ಭಕುತರ । ಕಟಕ ಸರ್ವದ ಕಾವ ,
ಧ್ಯಾನಿಪರ ಮನದಲಿ । ತಟಿತದಂದದಿ ಪೊಳೆವ, ಮಹಾನುಭಾವ ।
ಹಾಟಕ ಕಶಿಪು ಸುತನ ಪಿಡಿದು ಧೂ । ರ್ಜಟಿಯು ಪರನೆಂತೆಂದು ಬಂದು ।
ತುಟಿಯ ಬಿಡದೆಲೆ ಬಾದಿಸಲು ಬಲು । ಹಟದಿ ನಿನ್ನನು ತುತಿಸಿ ಕೊಳುತಿರೆ ।

ಚಿಟಚಿಟನೆ ಚೀರುತ್ತಜಾಂಡದ । ಕಟಹ ಪಟಪಟ ಬಿಚ್ಚುವಂದದಿ ,
ಕಟಕಟನೆ ಪಲ್ಕಡಿದು ಕಂಭದಿ । ಛಟಛಟಾಛಟರೆನ್ನ ಪೊಳೆಯುತ ।
ಕಠಿಣ ಖಳನ ಕೆಡಹಿ ಅವನ । ಜಠರವನು ನಖದಿಂದ ಭೇದಿಸಿ ।
ಧಿಟದ ತರಳನ ಕಾಯ್ದೆ ಎನ್ನಯ । ಕುಟಿಲ ಕಟುಮತಿ ಅಟತವಾನಲ ।
ವಟದೆಲೆಯ ಸಂಪುಟದಲೊರಗಿ ಉಂ । ಗುಟವ ಮೆಲುವ ಮೂಲಕಾರಣ ।
ಚಟುಲ ವಿಕ್ರಮ ಧೀರ ಭವಸಂ । ಕಟಹರಣ ವೆಂಕಟರಮಣ ಹರೆ ॥ ೨ ॥

ಪನ್ನಗಾಚಲನಿಲಯ ಶ್ರೀ ಶ್ರೀನಿವಾಸ । ಪನ್ನಗಾಶನ ಪ್ರೀಯ,
ದುರಿತಾದ್ರಿಕುಲಿಶ ಮೋ- । ಹನ್ನ ನಿರ್ಜಿತ ಮಾಯಾ , ಕಾಯಯ್ಯ ಜೀಯ।
ನಿನ್ನ ಹೊರೆತಿನ್ನನ್ಯದೇವರ । ಮನ್ನಿಸೆನೊ ಮನ ವಚನಕಾಯದಿ ।
ಇನ್ನು ಮುನ್ನಿದು ಸಿದ್ಧವಯ್ಯಾ । ಪನ್ನಜನಕಾರುಣ್ಯ ಮೂರುತಿ ।
ಜನ್ಮ ಜನ್ಮಾಂತರದಿ ಮಾಡಿದ । ಎನ್ನಘಾವಳಿಗಳನೆ ಕಳೆದು ।
ಭಿನ್ನರಹಿತ ಜ್ಞಾನದಿಂದಲಿ । ಚೆನ್ನ ಭಕ್ತರ ಸಂಗಪಾಲಿಸೊ ।
ನಿನ್ನಬೇಡುವೆ ನಿದನಿ ಗುಣನಿಧೆ । ಬನ್ನ ಬಡಿಸುವುದೇಕೆ ಶರಣನ ।
ಹೊನ್ನು ಹಣ ಹೆಣ್ಣುಗಳ ಕೊಡು ಯೆಂ । ದಿನ್ನು ಯಾಚಿಪೆನಲ್ಲ ನಿನ್ನನು ।
ನಿನ್ನ ಬಿಂಬಕ್ರಿಯೆಗಳನ್ನೆ ಚೆನ್ನಾವಾಗಿ ತಿಳಿಸೊ ಜೀವರ ।
ಭಿನ್ನ ಗುರುಗೋಪಾಲ ವಿಠ್ಠಲ ಪ್ರ । ಸನ್ನ ಭಾಗ್ಯ ದಯಾನಿಧೇ ಹರೇ ॥ ೩ ॥

॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

<u>ರಾಮಾದೂತನ ಪಾದ</u>

॥ ಶ್ರೀಮಧ್ವರಾಜಗುರುಭ್ಯೋನಮಃ ॥

ರಾಗ – ದರ್ಬಾರ್

ರಾಮಾದೂತನ ಪಾದತಾಮರಸವ ಕಂಡ

ಆಮನುಜನೆ ಧನ್ಯನೋ ॥ ಪ ॥

ಶ್ರೀಮನೋಹರನಂಘ್ರಿ ಭಜಕಸ್ತೋಮಕುಮುದಕೆ ।

ಸೋಮನೆನಿಸುವ ॥ ಭೂಮಿಯೊಳು ಯದುಗಿರಿಯ ।

ಸೀಮೆಯ ಕಾಮವರದೊಳು ಪ್ರೇಮದಿಂದಿಹ ॥ ಅ ॥ ಪ ॥

ಕೋತಿ ರೂಪದಿ ರಘುನಾಥನಾಜ್ಞೆಯ ತಾಳಿ ।

ಪಾಥೋದಿಯ ಲಂಘಿಸಿ ॥

ಖ್ಯಾತಲಂಕೆಯ ಪೊಕ್ಕು ಶೋಧಿಸಿ ಮಾತೆಯನು ।

ಕಂಡೆರಗಿದಶಮುಖ ॥ ಪೋತ ಖಳಕುಲ –

ವ್ರಾತಘಾತಿಸಿ ಸೀತೆ ವಾರ್ತೆಯ ನಾಥಗರುಹಿದ ॥ ೧ ॥

ಪಾಂಡುಸುತನೆ ಪ್ರಚಂಡ ಗದೆಯನುದೋ –

ರ್ದಂಡದಿ ಧರಿಸುತಲಿ ॥

ಮಂಡಲಾದೊಳು ಭಂಡ ಕೌರವ ಚೆಂಡರಿಪುಗಳ

ಖಂಡಿಸಿ ಶಿರ ಚೆಂಡನಾಡಿ ಸತಿಗೆ ಕರುಳಿನ

ದಂಡೆ ಮುಡಿಸಿದುದ್ದಂಡ ವಿಕ್ರಮ ॥ ೨ ॥

ಧಾರುಣಿಯೊಳು ದ್ವಿಜನಾರಿಗರ್ಭದಿ ಬಂದು ।

ಮೂರೊಂದಾಶ್ರಮ ಧರಿಸಿ ॥

ಧೀರ ನೀನೇಳಧಿಕ ತ್ರಿದಶಸಾರ ಗ್ರಂಥಗಳ ವಿರಚಿಸಿ । ಮಹ–

ಶೂರ ಶ್ರೀ ಗೋಪಾಲ ವಿಠಲನ ಚಾರುಚರಣಕೆ ಅರ್ಪಿಸಿದ ಗುರು ॥ ೩ ॥

॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನಾರಾಯಣಾಯನಮಃ ॥
ಶ್ರೀಗೋಪಾಲದಾಸಗುರುಭ್ಯೋನಮಃ

ರಾಗ : ಮೋಹನ                                   ತಾಳ:ಅಟ್ಟತಾಳ

ಗೋಪಾಲದಾಸರಾಯ । ನಿನ್ನಯ ಪಾದ । ನಾ ಪೊಂದಿದೆನು ನಿಶ್ಚಯ ॥ಪ॥
ಈ ಪೀಡಿಸುವ ತಾಪತ್ರಯಗಳೊಡಿಸಿ । ಕೈಪಿಡಿದೆನ್ನನು ನೀ ಪಾಲಿಸುವುದು ॥ಅ ॥
ಘೋರವ್ಯಾಧಿಗಳ ನೋಡಿ । ವಿಜಯರಾಯ । ಭೂರಿಕರುಣವ ಮಾಡಿ।
ತೋರಿದರಿವರೇ ಉದ್ಧಾರಕರೆಂದಂದಿ ।
ನಾರಭ್ಯ ತವ ಪಾದ ಸಾರಿದ ಸಲಹೆಂದು ॥
ಸೂರಿ ಜನ ಸಂಪ್ರೀಯ ಸುಗುಣೋ ।
ಧಾರ ದುರುಳನ ದೋಷನಿಚಯವ ।
ದೂರಗೈಸೊ ದಯಾಂಬುನಿಧೇ ನಿ ।
ವಾರಿಸದೆ ಕರಪಿಡಿದು ಬೇಗದಿ ॥ ೧ ॥
ಅಪಮೃತ್ಯುವಿನ ತರಿದೆ । ಯೆನ್ನೊಳಗಿದ್ದ । ಅಪರಾಧಗಳ ಮರೆದೆ ।
ಚಪಲಚಿತ್ತನಿಗೊಲಿದ್ವಿಪುಲಮತಿಯನಿತ್ತು ।
ನಿಪುಣನೆಂದೆನಿಸಿದ ತಪಸಿಗಳಿಂದಲಿ ॥
ಕೃಪಣವತ್ಸಲ ನಿನ್ನ ಕರುಣೆಗೆ ।
ಉಪಮೆಗಾಣೆನು ಸಂತತವು ಕಾ।
ಶ್ಯಪಿಯೊಳಗೆ ಬುಧರಿಂದ ಜಗದಾ ।
ಧಿಪನ ಕಿಂಕರನೆನಿಸಿ ಮೆರೆದೆ ॥ ೨ ॥
ಎನ್ನ ಪಾಲಿಸಿದಂದದಿ । ಸಕಲ ಪ್ರ ।
ಪನ್ನರ ಸಲಹೋ ಮೋದಿ ।
ಅನ್ಯರಿಗೀಪರಿ ಬಿನ್ನಪಗೈಯೇ ಜ ।
ಗನ್ನಾಥವಿಠಲನ ಸನ್ನುತಿಸುವ ಧೀರ ॥
ನಿನ್ನ ನಂಬಿದ ಜನರಿಗೀಪರಿ ಬನ್ನವೇ ಭಕ್ತಾನುಕಂಪಿ ಶ।
ರಣ್ಯ ಬಂದೊದಗೀಸಮಯದಿ ಅ ।
ಹರ್ನಿಶಿ ಧ್ಯಾನಿಸುವೆ ನಿನ್ನನು ॥ ೩ ॥

॥ ಶ್ರೀಗೋಪಾಲದಾಸಗುರ್ವಂತರ್ಗತ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

|| ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನೃಸಿಂಹಾಯನಮಃ ||

ರಾಗ : ಮುಖಾರಿ ತಾಳ: ಆದಿತಾಳ

ಕಾಯೋ ಶ್ರೀ ನಾರಸಿಂಹ ಕಾಯೋ || ಪ ||

ಕಾಯೋ ಶ್ರೀನಾರಸಿಂಹ ತ್ರಿಯಂಬಕಾದ್ಯಮರೇಶ
ಭಯ ಅಂಧಂತಿಮಿರಮಾರ್ತಾಂಡ ಶ್ರೀನಾರಸಿಂಹ || ಅ.ಪ ||

ಘೋರ ಅಕಾಲಮೃತ್ಯು ಮೀರಿಬರಲು ಕಂಡು
ಧೀರ ನೀ ಬಿಡಿಸದಿನ್ನ್ಯಾರೊ ಶ್ರೀ ನಾರಸಿಂಹ || 1 ||

ಭೀಷಣನೆ ಸುಭದ್ರ ದೋಷ ಮೃತ್ಯುಗೆ ಮೃತ್ಯು
ಸುಷುಮ್ನಾನಾಡಿಸ್ಥಿತವಿಭುವೆ ಶ್ರೀನಾರಸಿಂಹ || 2 ||

ಜ್ಞಾನರಹಿತನಾಗಿ ನಾ ನಿನ್ನ ಮರೆತರೆ
ನೀನೂ ಮರೆತದ್ಯಾಕೆ ಪೇಳೊ ಶ್ರೀನಾರಸಿಂಹ || 3 ||

ಪ್ರಬಲೋತ್ತಮನೆನಿಸಿ ಅಬಲರ ಕಾಯದಿರೆ
ಸುಬಲರು ಕಂಡು ಮೆಚ್ಚುವರೆ ಶ್ರೀನಾರಸಿಂಹ || 4 ||

ಪಾಲಮುನ್ನೀರಾಗರ ಪರುಮೆಮನೋಹರ ಗೋ -
ಪಾಲವಿಠಲ ಜಗತ್ಪಾಲ ಶ್ರೀನಾರಸಿಂಹ || 5 ||

|| ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ||